ಸಾಕ್ಷಿ ಯನ್ನು ದಿಃ 10.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ.

1. ನಮ್ಮ ತಂದೆಯವರು ಸಹಿ ಮಾಡಿರುವ ಟ್ರಾಕ್ಟರ್ ಇನ್ಸಟಾಲೇಶನ್ ಸರ್ಟಫಿಕೇಟಿನ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-22 ಎಂದು ಗುರುತಿಸಲಾಯಿತು.
2. ಸಾಕ್ಷಿಯು ನಿಡಿ - 21 ರಲ್ಲಿರುವ ತನ್ನ ತಂದೆ ರಾಮೇಗೌಡರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಡಿ - 21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ವಕೀಲರಿಂದಃ**

1. ಈ ದಿನ ಸಾಕ್ಷಿ ಹೇಳುವಂತೆ ನನಗೆ ಯಾವುದೇ ಸಮನ್ಸ್ ಬಂದಿಲ್ಲ. ಈ ದಿನ ನಿಮ್ಮನ್ನು ಸಾಕ್ಷಿ ಹೇಳಲು ಯಾರು ಕರೆದರು ಎಂದರೆ, ಶಶಿ ಮತ್ತು ಕೃಷ್ಣಕುಮಾರ ಕರೆದಿರುತ್ತಾರೆ.
2. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ.
3. ನಾನು ಪಿರಿಯಾಪಟ್ಟಣದಲ್ಲಿ ವಾಸವಿಲ್ಲ ಆದರೆ ಜಮೀನುಗಳು ಇಲ್ಲೇ ಇವೆ.
4. ಪಿರಿಯಾಪಟ್ಟಣದಲ್ಲಿ ರಾಮೇಗೌಡ ಎಂಬುವವರು ಬೇಕಾದಷ್ಟು ಜನ ಇದ್ದಾರೆ ಎಂದರೆ, ಸರಿ.
5. ನಿಡಿ - 21 ರ ದಾಖಲೆಯಲ್ಲಿ ರಾಮೇಗೌಡನ ತಂದೆ ಹೆಸರು ಅಥವಾ ಅವರ ವಯಸ್ಸು ಮತ್ತು ಯಾವ ಬೀದಿ ಎಂದು ನಮೂದಾಗಿಲ್ಲ ಎಂದರೆ, ಸರಿ.
6. ನನ್ನ ತಾತನ ಹೆಸರು ಬೋರೇಗೌಡ. ನಿಡಿ-1 ರಲ್ಲಿ ಬೋರೇಗೌಡರ ಮಗ ರಾಮೇಗೌಡ ಎಂದು ಬರೆದಿಲ್ಲ.
7. ನಿಡಿ - 1 ರಲ್ಲಿ ನಿಮ್ಮ ತಂದೆಯ ಸಹಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಮ್ಮ ಬಳಿ ಬಂದು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುವಂತೆ ಕೇಳಿದ್ದರಿಂದ ಅವರಿಗೆ ಅನುಕೂಲವಾಗಲಿ ಎಂದು ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

8. ನಿಡಿ-22 ರಲ್ಲಿ ಬರೆದಿರುವ ರಾಮೇಗೌಡ ಹಾಗೂ ನಿಡಿ - 21 ರಲ್ಲಿ ಬರೆದಿರುವ ರಾಮೇಗೌಡರ ಹೆಸರಿಗೆ ತಾಳೆ ಇಲ್ಲ ಎಂದರೆ ಸರಿಯಲ್ಲ.
9. ನೀವು ಅಕ್ರಮ ಲಾಭ ಪಡೆಯಲು ಪ್ರತಿವಾದಿ ನಂ.8 ಮತ್ತು 10 ರವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
10. ನಿಡಿ - 21 ರಲ್ಲಿ ಮೊದಲನೆ ಪುಟದಲ್ಲಿ ರಾಮೇಗೌಡ ಎಂದು ಬರವಣಿಗೆ ಆಗಿದೆಯಾ ಎಂದರೆ ಇಲ್ಲ.
11. ನನ್ನ ತಂದೆ 2012 ರಲ್ಲಿ ಮೃತರಾಗಿದ್ದಾರೆ. ನಿಮ್ಮ ತಂದೆ ನಿಡಿ - 21 ಕ್ಕೆ ಯಾವುದೇ ಸಹಿ ಹಾಕಿಲ್ಲ. ಈ ದಾವೆ ವಾದ ವಿವಾದಕ್ಕೆ ಬಂದಾಗ ನೀವು ಹಾಗೂ 8 ಮತ್ತು 10 ನೇ ಪ್ರತಿವಾದಿಗಳು ಸೇರಿ ಸುಳ್ಳು ದಾಖಲೆ ಹಾಗೂ ಸಹಿಗಳನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.
12. 8 ಮತ್ತು 10 ನೇ ಪ್ರತಿವಾದಿಗಳಿಗೆ ಸಹಾಯವಾಗಲಿ ಎಂದು ಹಾಗೂ ವಾದಿಗೆ ತೊಂದರೆಯಾಗಲಿ ಎಂದು ಸತ್ಯಾಂಶ ಮರೆಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ